ಇದನ್ನು ಗಮನಿಸಿದ ನಮ್ಮ ಕಡೆಯ ಬೇಹುಗಾರರು ಅಕ್ಕಪಕ್ಕದಲ್ಲೇ ನಿಂತು ಇವರು ಮಾಡುತ್ತಿದ್ದ 'ಪರೋಪಕಾರಿ' ಕೆಲಸವನ್ನು ನಮ್ಮ ಗಮನಕ್ಕೆ ತಂದರು. ಅಂಥವರನ್ನೆಲ್ಲಾ ಒಬ್ಬೊಬ್ಬರನ್ನೇ ಹಿಡಿದು ಹೆಸರು ವಿಳಾಸ ವಿಚಾರಿಸಿಕೊಳ್ಳತೊಡಗಿದ ಮೇಲೆ ಅವರ ಈ ಸಮಾಜಸೇವೆಯು ನಿಯಂತ್ರಣಕ್ಕೆ ಬಂತು.

ಕುಡಿದವರ ವಿಶೇಷತೆ ಏನಪ್ಪಾ ಎಂದರೆ ನಾನು ಕುಡಿದಿದ್ದೀನಿ ಅಂತ ಅಂತ ಒಪ್ಪಿಕೊಳ್ಳದಿರುವುದು. ಹೌದ್ರೀ, ನಾನು ಕುಡಿದು ಬೈಕು ಓಡಿಸಿದ್ದೀನಿ ಅಷ್ಟೇ ತಾನೆ, ಏನಿವಾಗ? ಅದೇನು ನಿಮ್ಮ ಟೆಸ್ಟು ತಗಳಿ, ಮಾಡ್ಕಳಿ ಅಂತ ಇದುವರೆಗೂ ಒಬ್ಬನಾದರೂ ಮುಂದೆ ಬಂದಿದ್ದಿಲ್ಲ. ಅಯ್ಯೋ ಇಷ್ಟೇ ಇಷ್ಟು ತಗಂಡಿದೀನಿ ಬುಡೀ ಸ್ವಾಮೀ, ನಾನೇನು ದಿನಾ ಕುಡಿಯೋನಲ್ಲ, ನಮಗೂ ಹೆಂಡ್ರು ಮಕ್ಕಳು ಇದಾರೆ ಅಂತ ಕೆಲವರು ಒಪ್ಪಿಕೊಳ್ಳುತ್ತಾರಾದರೂ ಆಲ್ಕೋಮೀಟರಿನಲ್ಲಿ ಊದುವುದಕ್ಕೆ ಮೀನ ಮೇಷ ಎಣಿಸುತ್ತಾರೆ. ಕುಡಿದವನನ್ನು ಬೈಕು ಸಮೇತ ಹಿಡಿಯುವುದೇ ಒಂದು ಕಸರತ್ತು. ಮೊದಮೊದಲು ಹಿಡಿಯುತ್ತಾರೆಂದು ಗೊತ್ತಾಗುತ್ತಿದ್ದಂತೆ ಕೆಲವರು ಬೈಕನ್ನು ಅಲ್ಲೇ ಉರುಳಿಸಿ ಓಡಿಬಿಡುತ್ತಿದ್ದರು. ಬರೀ ಬೈಕು ಮಡಗಿಕೊಂಡು ಪೊಲೀಸ್ರೇನು ಮಾಡ್ತಾರೆ ನೋಡ್ಕಳುವ ಬಾರ್ಲಾ... ಅಂತ ಅವರೆಲ್ಲಾ ಮಾತಾಡಿಕೊಂಡಿದ್ದರ ಫಲ ಇದು! ಹೌದು. ಬೈಕು ಇಟ್ಟುಕೊಂಡು ನಾವು ಮಾಡೋದಾದರೂ ಏನು? ಡ್ರಿಂಕ್ ಅಂಡ್ ಡ್ರೈವು ಕೇಸು ಹಾಕುವುದಕ್ಕಂತೂ ಸಾಧ್ಯವಿಲ್ಲ. ಯಾಕೆಂದರೆ ಅದಕ್ಕೆ ಅವನ ಆಲ್ಕೋಮೀಟರು ರೀಡಿಂಗು, ನೋಟಿಸಿಗೆ ಆತನ ಸಹಿ, ವಯಸ್ಸು, ಮನೆ ಅಡ್ರೆಸ್ಸು ಇತ್ಯಾದಿ ವಿವರಗಳು ಬೇಕಾಗುತ್ತವೆ. ಅವಿಲ್ಲದಿದ್ದರೆ ನ್ಯಾಯಾಲಯಕ್ಕೆ ಚಾರ್ಜ್‌ಷೀಟು ಹಾಕಲು ಸಾಧ್ಯವಿಲ್ಲ.

ಹೀಗೆ ಬಿಟ್ಟುಬಂದ ಬೈಕು ಬಿಡಿಸಿಕೊಳ್ಳಲೇನು ಮಾಡುವುದು? ಇದ್ದೇ ಇದೆಯಲ್ಲ, ಸಣ್ಣಪುಟ್ಟ ಲೀಡರುಗಳ ಕೈಕಾಲು ಹಿಡಿಯೋದು. ಠಾಣೆಗೆ ಕರೆದುಕೊಂಡು ಬರೋದು. ಅವರಿಂದ ವಶೀಲಿ ಮಾಡಿಸಿ ಠಾಣಾಧಿಕಾರಿ ಕೈಲಿ ಬುದ್ಧಿವಾದವೋ ಬೈಗುಳವೋ? ಅನ್ನಿಸಿಕೊಂಡು ಬೈಕು ತೆಗೆದುಕೊಂಡು ಬರುವುದು. ಮಾನ ಮೂರಾಬಟ್ಟೆಯಾದರೂ ಪರವಾಯಿಲ್ಲ, ಕುಡಿದು ಓಡಿಸಿದ ಕೇಸು ಹಾಕಿಸಿಕೊಳ್ಳದೆ ಬೈಕು ವಾಪಸು ಸಿಗುತ್ತದಲ್ಲ ಅಷ್ಟು ಸಾಕು, ಈ ಲೆಕ್ಕಾಚಾರ ಅವರದು.

ಡ್ರಿಂಕ್ ಅಂಡ್ ಡ್ರೈವು ಕೇಸಿಗೆ ಯಾಕಿಷ್ಟು ಬೆದರಬೇಕು? ಅದಕ್ಕೂ ಕಾರಣಗಳಿವೆ. ಕುಡಿಯುವುದಕ್ಕೆ ಯಾರದೂ ತಕರಾರಿಲ್ಲ (ಮನೆಯವರನ್ನು ಬಿಟ್ಟು!). ಯಾರು ಎಷ್ಟು ಬೇಕಾದರೂ ಕುಡಿಯಬಹುದು. ಮನಬಂದಂತೆ ಕುಡಿದು ಬಿದ್ದು ಹೊರಳಾಡಬಹುದು. ಆದರೆ ಕುಡಿದ ನಂತರ ಗಾಡಿ ಓಡಿಸುವುದಿದೆಯಲ್ಲ? ಅದು ಹಲವರ ಪ್ರಾಣ ತೆಗೆಯುತ್ತದೆ. ಅದು ರಸ್ತೆ ಮೇಲೆ ಓಡಾಡುವವರಿರಬಹುದು. ಖುದ್ದು ಸವಾರನೇ ಆಗಬಹುದು. ಇಬ್ಬರಿಗೂ ಅದು ಸಂಚಕಾರವೇ.

ಹೀಗೆಂದು ಆ ದಿನ ಸಿಕ್ಕಿದ್ದ ಆ ಹುಡುಗನಿಗೂ ಬುದ್ಧಿ ಹೇಳಿದೆ. ಪಕ್ಕದ ರಾಜ್ಯದ ಅಧಿಕಾರಿಯೊಬ್ಬರ ಮಗನಂತೆ. ಎಂಜಿನಿಯರಿಂಗ್ ವ್ಯಾಸಂಗ ಮಾಡಿಕೊಂಡು ಪಿಜಿಯಲ್ಲಿ ವಾಸವಿದ್ದ. ಅವನ ಅದೃಷ್ಟ ಚೆನ್ನಾಗಿತ್ತು. ಕೇಸು ಹಾಕುವಷ್ಟು ಪ್ರಮಾಣದ ಮದ್ಯ ಸೇವಿಸಿರಲಿಲ್ಲ. ಸ್ನೇಹಿತನೊಬ್ಬನ ಬರ್ತ್‌ಡೇ ಪಾರ್ಟಿ ಮಾಡಿಕೊಂಡು ಬರುತ್ತಿರುವುದಾಗಿ ಹೇಳಿದ. ಕನ್ನಡ ಬರ್ತದಾ? ಕೇಳಿದೆ. 'ಸೊಲುಪ... ಸೊಲುಪ' ಅಂದ.

'ನೋಡು ತಮ್ಮಾ, ಇನ್ನಾ ನೀನು ಸ್ಟೂಡೆಂಟು. ದುಡ್ಡು ಬೇಕು ಅಂದ್ರೆ ಅಪ್ಪನ ಮುಂದೆ ಕೈಚಾಚಬೇಕು. ಅಂಥದ್ರಲ್ಲಿ ಈ ತರದ ಷೋಕಿಗಳು ಸಾಕಿಕೊಂಡಿದ್ದೀಯ. ದುಡಿಯೋಕೆ ಶುರು ಮಾಡಿದ ಮೇಲೆ ಇನ್ನೇನು ಕಥೆಯೋ? ಪಾರ್ಟಿ ಮಾಡು, ಬೇಡ ಅನ್ನುವುದಕ್ಕೆ ನಾವು ಯಾರು? ಕುಡಿದ ಮೇಲೆ ಬೈಕ್ ಚಾಲನೆ ಬೇಡ ಅಷ್ಟೇ ಹೇಳೋದು. ಬೇಕಾದ್ರೆ ಕ್ಯಾಬೋ ಆಟೋನೋ ಹಿಡ್ಕಂಡು ರೂಮು